**ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ**

ಸಿಸಿ ನಂ. 752/2023

ಫ್ರಾಸಾ : 04

ಚಾಸಾ : 09

| | | |
|---|---|---|
| ಹೆಸರು | : | ಶಿವಪ್ರಸಾದ್ |
| ತಂದೆಯ ಹೆಸರು | : | ಕೃಷ್ಣ ಕಾಮತ್ |
| ಪ್ರಾಯ | : | 48 ವರ್ಷ |
| ಉದ್ಯೋಗ | : | ಎಲೆಕ್ಟ್ರಿಷಿಯನ್ |
| ವಾಸಸ್ಥಳ | : | ಬಂಟ್ವಾಳ ತಾಲೂಕು |

ದಿಃ **18.07.2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಅಪಘಾತ ಸ್ಥಳದ ಮಹಜರು ಆಗಿದ್ದು, ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ಅಪಘಾತ ಸ್ಥಳದ ಕಚ್ಚಾ ನಕ್ಷೆಯಾಗಿದ್ದು, ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–4(ಬಿ) ಎಂದು ಗುರುತಿಸಲಾಯಿತು. ನಿ.ಪಿ. 3 ಮತ್ತು 4 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೇನೆ. ಯಾವಾಗ ಎಂದು ನನಗೆ

ನೆನಪಿಲ್ಲ. ನಿ.ಪಿ. 3 ಮತ್ತು 4 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರು ಜರುಗಿಸಿರುವುದಿಲ್ಲ ಹಾಗೂ ಯಾವುದೇ ವಾಹಗಳನ್ನು ವಶಕ್ಕೆ ಪಡೆದಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಕಚ್ಚಾ ನಕ್ಷೆ ತಯಾರಿಸಿರುವುದಿಲ್ಲ. ಸಾಕ್ಷಿಗೆ ಕೆಎ-70-ಎಂ-4189 ಸಂಖ್ಯೆಯ ಕಾರು ಇರುವ 4 ಬಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಎಪಿಪಿಯವರಿಂದಃ -

2. ದಿಃ 16-05-2023 ರಂದು ಸಂಜೆ 7.50 ರ ಸಮಯದಲಿ ಆರೋಪಿ ತನ್ನ ಬಾಬ್ತು ಕೆಎ-70ಎಂ-4189 ನೆ ಸಂಖ್ಯೇಯ ಕಾರನ್ನು ಬೆಳ್ತಂಗಡಿ ಕಡೆಯಿಂದ ಬಿಸಿ ರೋಡು ಕಡೆಗೆ ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಕಾವಳಪಡೂರು ಗ್ರಾಮದ ಕಾರಿಂಜ ಕ್ರಾಸ್ ನ ಸೆರಾ ಕ್ಲಿನಿಕ್ ಹತ್ತಿರ ರಸ್ತೇಯ ಬದಿಯನಲ್ಲಿ ನಡೆದುಕೂಂಡು ಬರುತ್ತಿದ್ದ ಪಾದಾಚಾರಿ ಸೇಸಮ್ಮ ಎಂಬುವವರ ಹಿಂಭಾಗಕ್ಕೆ ಡಿಕ್ಕಿ ಹೊಡೆದು ಅಪಘಾತಪಡಿಸಿದ ಪರಿಣಾಮ ಸೇಸಮ್ಮ ರವರಿಗೆ ತೀವ್ರ ರಕ್ತಗಾಯಗಳಾಗಿ ಆಸ್ಪತ್ರೆಯಲ್ಲಿ ಮೃತಪಟ್ಟ ಬಗ್ಗೆ ಪೊಲೀಸರು ದಿನಾಂಕ 16-05-2023 ರಂದು ನನ್ನ ಸಮಕ್ಷಮ ನಿ.ಪಿ. 3 ರಂತೆ ಅಪಘಾತದ ಸದಳದ ಮಹಜರು ಕ್ರಮ ಜರುಗಿಸಿ ನಿ.ಪಿ. 4 ರಂತೆ ಅಪಘಾತ ಸ್ಥಳದ ಕಚ್ಚಾ ನಕ್ಷೆಯನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ನಾನು ನಿ.ಪಿ. 3 ಮತ್ತು 4 ಕ್ಕೆ ಸಹಿ ಮಾಡಿರುತ್ತೇನೆ

ಎಂದರೆ ಸರಿಯಲ್ಲ. ಮಹಜರು ಕಾಲದಲ್ಲಿ ಪೊಲೀಸರು ಅಪಘಾತ ಪಡಿಸಿದ ಕೆಎ-70-ಎಂ-4189 ಸಂಖ್ಯೆಯ ಕಾರನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರಃ ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ